**OS . No 33/2014**
**P.W-1**

**( ದಿನಾಂಕ.23-03-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಮುಂದುವರೆದ ಪಾಟೀ ಸವಾಲುಃ ಶ್ರೀ. S.S.C ವಕೀಲರಿಂದ**

ನನ್ನ ಅಜ್ಜ ಸೈಬಣ್ಣರವರು 2000 ನೇ ಸಾಲಿನಲ್ಲಿ ಮನೆಯ ಪ್ರಮುಖರು ಅವರೇ ಇದ್ದರು ಎಂದರೆ ಸರಿ. ನನ್ನ ಅಜ್ಜ ಸೈಬಣ್ಣ ಪಂಚರ ಸಮಕ್ಷಮ ನನ್ನ ತಂದೆ ಮತ್ತು 4 ನೇ ಪ್ರತಿವಾದಿಗೆ ವಾಟನಿ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಾಟನಿ ಪತ್ರವನ್ನು ಪಂಚಾರ ಸಮಕ್ಷಮ ಬರವಣಿಗೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಾಟನಿ ಪ್ರಕಾರ ಸರ್ವೆ ನಂಬರ 302/2 ರಲ್ಲಿ 11 ಎಕರೆ 23 ಗುಂಟೆ ಜಮೀನನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅದೇ ಪ್ರಕಾರ ಸರ್ವೇ ನಂಬರ. 179 ರಲ್ಲಿ 3 ಎಕರೆ 27 ಗುಂಟೆ, 170 ರಲ್ಲಿ 1 ಎಕರೆ 35 ಗುಂಟೆ, ಸರ್ವೇ ನಂಬರ 173 ರಲ್ಲಿ 2 ಎಕರೆ 28 ಗುಂಟೆ ಹಾಗೂ ಸರ್ವೇ ನಂಬರ 8/6 ರಲ್ಲಿ 25 ಗುಂಟೆ ಜಮೀನನ್ನು ನನ್ನ ತಂದೆಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ನನ್ನ ಅಜ್ಜ ಸರ್ವೇ ನಂಬರ 302 ರಲ್ಲಿ 18 ಎಕರೆ 4 ಗುಂಟೆ ಜಮೀನನ್ನು ತಮ್ಮ ಉಪಜೀವನಕ್ಕೆ ಇಟ್ಟುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಾಟನಿ ಕಾಲಕ್ಕೆ ಸಾಕ್ಷಿದಾರರು ಆದ ಮಾಣಿಕ್ಕಪ್ಪ ತಂದೆ ಮಾದುರಾಯ, ಮುರಗಯ್ಯ ತಂದೆ ಮಹಾಂತಯ್ಯಸ್ವಾವಿ, ಶಿವಾನಂದ ತಂದೆ ಮಲಕಾಜಪ್ಪ, ಬಸವಣ್ಣೆಪ್ಪ ತಂದೆ ಗುಂಡಪ್ಪ ಹಾಗೂ ನನ್ನ ತಂದೆ ಶರಣಪ್ಪ ಹಾಜರಿದ್ದರು ಎಂದರೆ ಸರಿಯಲ್ಲ.

ಬಂಡಮ್ಮ ಅಂದರೆ 5 ನೇ ಪ್ರತಿವಾದಿ ನನ್ನ ತಂದೆಯ ತಂಗಿ ಅಂದರೆ ನನ್ನ ಅತ್ತೆ ಎಂದರೆ ಸರಿ. ಅವರಿಗೆ ಶಿವಲಿಲಾ ಎಂದು ಕೂಡಾ ಕರೆಯುತ್ತಾರೆ ಎಂದರೆ ಸರಿ. ನನ್ನ ತಂದೆ ಹಾಗೂ 5 ನೇ ಪ್ರತಿವಾದಿ ಹಾಗೂ ಸಾಕ್ಷಿದಾರರು ಎಲ್ಲರೂ ಕೂಡಾ ಸದರಿ ವಾಟನಿ ಪತ್ರಕ್ಕೆ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ವಾಟನಿ ಪತ್ರ ತೋರಿಸುತ್ತಿದ್ದು, ಅದರಲ್ಲಿ ನನ್ನ ತಂದೆ ಸಹಿ ಇಲ್ಲ ಎಂದು ನುಡಿಯುತ್ತಾರೆ. ನನ್ನ ಅಜ್ಜ ಸೈಬಣ್ಣ ಸಹಿ ಕೂಡಾ ವಾಟನಿ ಪತ್ರದಲ್ಲಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ದಿಃ 15-04-2000 ದಲ್ಲಿ ಆದ ವಾಟನಿ ಪತ್ರವನ್ನು ತೋರಿಸುತ್ತಿದ್ದು, ಅದರಲ್ಲಿ ಯಾರು ಸಹಿ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ವಾಟನಿ ಪತ್ರವಾಗಿದ್ದು ನನಗೆ ಮತ್ತು ನನ್ನ ತಾಯಿಗೆ ಆಗಿದ್ದು ಗೊತ್ತಿದ್ದರೂ ಕೂಡಾ 4 ನೇ ಪ್ರತಿವಾದಿ ಜಮೀನನ್ನು ಹೊಡೆದು ಹಾಕುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಜ್ಜ ಸದರಿ ವಾಟನಿ ಪತ್ರವನ್ನು ಎಲ್ಲರ ಸಮಕ್ಷಮ ಅಂದರೆ ನನ್ನ ತಂದೆ, ತಾಯಿ, 4 ಮತ್ತು 5 ನೇ ಪ್ರತಿವಾದಿ ಹಾಗೂ ಸಾಕ್ಷಿದಾರರ ಸಮಕ್ಷಮ ಮಾಡಿಕೊಟ್ಟಿದ್ದು ಇದ್ದರೂ ಕೂಡಾ, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮನೆಯಲ್ಲಿ ಕೂಡಾ ನನ್ನ ಚಿಕ್ಕಪ್ಪನಿಗೆ ಅರ್ಧ ಮತ್ತು ನಮಗೆ ಅರ್ಧ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ, 4 ನೇ ಪ್ರತಿವಾದಿ ತನ್ನ ಮನೆಯಲ್ಲಿ ಇರುವ ಅರ್ಧ ಪಾಲನ್ನು 40 ಸಾವಿರ ಹಣವನ್ನು ನನ್ನ ತಂದೆಗೆ ಕೊಟ್ಟು ಅವರಿಂದ ನನ್ನ ತಂದೆಯ ಅರ್ಧ ಪಾಲನ್ನು ತೆಗೆದುಕೊಂಡಿರುತ್ತಾರೆ ಎಂದರೆ

ಸರಿಯಲ್ಲ. ಅದೇ ರೀತಿ ಶಿವಪುತ್ರಪ್ಪ ಮಂಗಾಣೆ, ಶಂಬುಲಿಂಗ ಬಾಳಾಪುರ, ಮುರಗಯ್ಯ ಮಠಪತಿರವರ ಸಮಕ್ಷಮ ನನ್ನ ತಂದೆಗೆ 4 ನೇ ಪ್ರತಿವಾದಿ ಶಿವಾನಂದರವರು 40 ಸಾವಿರ ಹಣ ಕೊಟ್ಟು ಅವರ ಅರ್ಧ ಪಾಲನ್ನು ನನ್ನ ತಂದೆಯಿಂದ ತೆಗೆದುಕೊಂಡಿರುತ್ತಾರೆಂದರೆ ಸರಿಯಲ್ಲ. ಅವತ್ತಿನಿಂದ ಇವತ್ತಿನವರೆಗೂ 4 ನೇ ಪ್ರತಿವಾದಿಯೇ ಸದರಿ ಮನೆಯಲ್ಲಿ ಸ್ವಾಧೀನದಲ್ಲಿ ಇರುತ್ತಾನೆಂದರೆ ಸರಿಯಲ್ಲ. ಸದರಿ ಮನೆಯಲ್ಲಿ ಈಗ ಯಾರು ಇರುತ್ತಾರೆಂದು ಕೇಳಿದ ಪ್ರಶ್ನೆಗೆ, 4 ನೇ ಪ್ರತಿವಾದಿ ಶಿವಾನಂದ ಇರುತ್ತಾರೆಂದು ನುಡಿಯುತ್ತಾರೆ.

ನನ್ನ ತಾಯಿಗೆ ಓದಲು ಮತ್ತು ಬರೆಯಲು ಬರುವುದಿಲ್ಲ ಹಾಗೂ ಯಾವುದೇ ಭಾಷೆ ಬರುವುದಿಲ್ಲ, ಆದರೆ ಕನ್ನಡ ಮಾತನಾಡಲು ಬರುತ್ತದೆ. ಆದರೆ ಓದಲಿಕ್ಕೆ ಮತ್ತು ಬರೆಯಲಿಕ್ಕೆ ಬರುವುದಿಲ್ಲ. ಮೇಲೆ ಹೇಳಿದ ಸಾಕ್ಷಿದಾರರ ಮದ್ಯೆ ಮತ್ತು ನಮ್ಮ ನಡುವೆ ಯಾವುದೇ ವೈಮನಸ್ಸು ಇರುವುದಿಲ್ಲ. ಸದರಿ ವಾಟನಿ ಪತ್ರದಲ್ಲಿ ನನ್ನ ತಂದೆ,ತಾಯಿ, ಪಂಚರ ಸಮಕ್ಷಮ ಸಹಿ ಮಾಡಿದ್ದರೂ ಕೂಡಾ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿ ಕೂಡಾ ನನ್ನ ಅಜ್ಜ ಮಾಡಿದ ವಾಟನಿ ಪತ್ರಕ್ಕೆ ತಮ್ಮ ಒಪ್ಪಿಗೆ ಸೂಚಿಸಿರುತ್ತಾರೆ ಎಂದರೆ ಸರಿಯಲ್ಲ.

ಸುಮಾರು 20-22 ವರ್ಷಗಳಿಂದ ನನ್ನ ತಂದೆ ಮತ್ತು ನನ್ನ ತಾಯಿ ನಡುವೆ ಜೀವನಾಂಶದ ಕೇಸು ಕೆಳ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿದೆ ಎಂದರೆ ಸರಿಯಲ್ಲ.

ದಾವಾ ಸ್ವತ್ತುಗಳೆಲ್ಲವೂ ನನ್ನ ಅಜ್ಜ, ನನ್ನ ಚಿಕ್ಕಪ್ಪ ಹಾಗೂ ನನ್ನ ತಂದೆಯ ಹೆಸರಿನಲ್ಲಿ ಇರುತ್ತವೆ ಎಂದರೆ ಸರಿ. ವಾಟನಿ ಪ್ರಕಾರ ಪಹಣಿಗಳಾಗಿರುತ್ತವೆ ಎಂದರೆ ಸರಿಯಲ್ಲ. ವಾಟನಿಯಾದ ನಂತರ ವಾಟನಿ ಪ್ರಕಾರ ನನ್ನ ಅಜ್ಜ ಮತ್ತು ನನ್ನ ತಂದೆ 4 ನೇ ಪ್ರತಿವಾದಿ ಅನಕ್ಷರಸ್ತ ಇದ್ದ ಕಾರಣ ಮ್ಯೂಟೇಶನ ಮಾಡಿಕೊಡುತ್ತೇವೆಂದು ಹೇಳಿದ್ದರು ಆದರೆ ಇಲ್ಲಿಯವರೆಗೆ ಮಾಡಿಸಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಅದೇ ಕಾರಣದಿಂದ ಈಗ ನಾವು ಪಾಲು ಕೇಳುತ್ತಿದ್ದೇವೆ ಎಂದರೆ ಸರಿಯಲ್ಲ.

ಅದೇ ರೀತಿ ದಿಗಂಬರ ಬೆಳಮಗಿ ಮತ್ತು ಶಂಕರಪ್ಪ ಮಂಗಾಣೆ ಅಂದರೆ 6 ನೇ ಪ್ರತಿವಾದಿಗೆ ನನ್ನ ತಂದೆ ತನ್ನ ಪಾಲಿಗೆ ಬಂದ ಜಮೀನುಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಪಾಲಿಗೆ ಬಂದ ಜಮೀನನ್ನು ಮಾರಾಟ ಮಾಡಿಕೊಂಡಿದ್ದರು ಕೂಡಾ, 4 ನೇ ಪ್ರತಿವಾದಿ ಪಾಲಿಗೆ ಬಂದ ಜಮೀನುಗಳನ್ನು ಹೊಡೆದು ಹಾಕುವ ಉದ್ದೇಶದಿಂದ ಯಾವುದೇ ಪಾಲು ಆಗಿಲ್ಲವೆಂದು ಸುಳ್ಳು ಸಾಧಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಾಲು ಆಗಿದ್ದು ಗೊತ್ತಿದ್ದರೂ ಕೂಡಾ 4 ನೇ ಪ್ರತಿವಾದಿ ಜಮೀನನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು, ನನ್ನ ತಂದೆ-ತಾಯಿ ಕೂಡಿ ಕೊಂಡು 4 ನೇ ಪ್ರತಿವಾದಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಸುಳ್ಳು ದಾವೆ ಮಾಡಿರುತ್ತೇವೆ ಎಂದರೆ ಸರಿಯಲ್ಲ.

**OS . No 33/2014**
**P.W-1**

ಸರ್ವೇ ನಂಬರ 301 ರಲ್ಲಿ 2 ಎಕರೆ 11 ಗುಂಟೆ ನನ್ನ ಹೆಸರಿನಲ್ಲಿದೆ ಎಂದರೆ ಸರಿ. ಸದರಿ ಜಮೀನು ಈ ದಾವಾ ಸ್ವತ್ತುಗಳಲ್ಲಿ ಸೇರಿಸಿಲ್ಲ ಎಂದರೆ, ಸಾಕ್ಷಿ ಸದರಿ ಜಮೀನನ್ನು ನನ್ನ ಅಜ್ಜಿ ನನಗೆ ದಾನ ಮಾಡಿಕೊಟ್ಟಿರುತ್ತಾಳೆ ಎಂದು ನುಡಿಯುತ್ತಾರೆ. ಸದರಿ ದಾನ ಮಾಡಿಕೊಟ್ಟ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ.

ಸದರಿ ದಾನಪತ್ರದ ಆಸ್ತಿ ಮೊದಲು ನನ್ನ ಅಜ್ಜಿ ಹೆಸರಿನಲ್ಲಿ ಇತ್ತು, ನಂತರ ನನ್ನ ಹೆಸರಿನಲ್ಲಿ ಆಗಿರುತ್ತದೆ. ನನ್ನ ಅಜ್ಜಿ ಹೆಸರು ಹುಚ್ಚವ್ವ ಸಲಗರ ಇರುತ್ತದೆ. ಸದರಿ ದಾನಪತ್ರದ ಆಸ್ತಿ ವಿಕೆ ಸಲಗರ ಗ್ರಾಮದಲ್ಲಿದೆ. ನನ್ನ ಹೆಸರಿನಲ್ಲಿ ಸದರಿ ಜಮೀನನ್ನು ದಾನಪತ್ರ ಮಾಡಿರುತ್ತಾರೋ ಅಥವಾ ವಿಲ್ ಮಾಡಿರುತ್ತಾರೆ ನನಗೆ ನಿಖರವಾಗಿ ಗೊತ್ತಿಲ್ಲ. ಆ ಬಗ್ಗೆ ದಾಖಲೆ ಕೊಟ್ಟಿಲ್ಲ. ಸದರಿ ಜಮೀನು ಕೂಡಾ ಏಕತ್ರ ಕುಟುಂಬದ ಜಮೀನು ಇದ್ದರೂ ಕೂಡಾ ಅದನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ.

ನನ್ನ ತಂದೆ ತನ್ನ ಹೆಸರಿನಲ್ಲಿರುವ ಜಮೀನುಗಳನ್ನು ಮಾರಾಟ ಮಾಡಿಕೊಂಡಿ ಹೋಗಿದ್ದರು 4 ನೇ ಪ್ರತಿವಾದಿ ಪಾಲಿಗೆ ಬಂದ ಜಮೀನುಗಳನ್ನು ಹೊಡೆದು ಹಾಕುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಆಳಂದ**